Publication: Prajavani - Kshema Kushala

Date: Wednesday, 20th April, 2016

Edition: Bangalore

# ಇಂಡಿಯಾಫಸ್ಟ್ ಲೈಫ್ ಇನ್ಶುರನ್ಸ್

ಇಂಗ್ಲೆಂಡ್ ಮೂಲದ ಲೀಗಲ್ ಅಂಡ್ ಜನರಲ್ ಸಂಸ್ಥೆಯ ಸಹಯೋಗದಲ್ಲಿ ಬ್ಯಾಂಕ್ ಆಫ್ ಬರೋಡಾ ಮತ್ತು ಆಂಧ್ರ ಬ್ಯಾಂಕ್ ಆರಂಭಿಸಿರುವ ಇಂಡಿಯಾಫಸ್ಟ್ ಲೈಫ್ ಇನ್ಶುರನ್ಸ್ ಸಂಸ್ಥೆಯು ಅಸ್ತಿತ್ವಕ್ಕೆ ಬಂದ 5 ವರ್ಷಗಳಲ್ಲಿ ವಿಮೆ ರಂಗದಲ್ಲಿ ತನ್ನದೇ ಆದ ಛಾಪು ಬೀರಿದೆ.



ವಿಶಾಖಾ

ಹಣಕಾಸು ಸೇವೆಗೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಖಾಸಗಿ ವಲಯದ ಸಂಸ್ಥೆಗಳಲ್ಲಿ 25 ವರ್ಷಗಳ ಅನುಭವ ಹೊಂದಿರುವ ಆರ್. ಎಂ. ವಿಶಾಖಾ ಅವರು ಈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಸಂಸ್ಥೆಯನ್ನು ಯಶಸ್ವಿನ ಹಾದಿಯಲ್ಲಿ ಮುನ್ನಡೆಸುತ್ತಿದ್ದಾರೆ. ರಿಟೇಲ್ ಮತ್ತು ಕಾರ್ಪೊರೇಟ್ ವಲಯದ ಜೀವ ವಿಮೆ ವಹಿವಾಟನ್ನು ಸಮನಾಗಿ ವಿಸ್ತರಿಸುವ ಆಲೋಚನೆ ಹೊಂದಿದೆ. ಪಾಲಿಸಿಗಳ ವಿಷಯದಲ್ಲಿ ತಂತ್ರಜ್ಞಾನ ಅಳವಡಿಕೆಗೆ ಹೆಚ್ಚು ಆದ್ಯತೆ ನೀಡಿರುವ ಸಂಸ್ಥೆಯು ಟ್ಯಾಬ್ಲೆಟ್ ಕಾಗದ ಬಳಕೆಗೆ ಮಿತಿ ವಿಧಿಸಲು ಮುಂದಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ವಿಮೆ ವಹಿವಾಟನ್ನು ಶೇ 30ರಷ್ಟು ವೃದ್ಧಿಯಾಗುವ ನಿರೀಕ್ಷೆ ಹೊಂದಿದೆ ಎಂದು ವಿಶಾಖಾ ಅವರು ಹೇಳುತ್ತಾರೆ. ಮುಂಬೈ ಮೂಲದ ಸಂಸ್ಥೆಯು ಸದ್ಯಕ್ಕೆ ದೇಶದಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ನಗರ -ಪಟ್ಟಣಗಳಲ್ಲಿ ತನ್ನ ಕಾರ್ಯವ್ಯಾಪ್ತಿ ವಿಸ್ತರಿಸಿದೆ. ಕರ್ನಾಟಕದಲ್ಲಿಯೂ ಪಾಲುದಾರ ಬ್ಯಾಂಕ್‌ಗಳಾದ ಆಂಧ್ರಾಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡಾದ ಶಾಖೆಗಳ ಮೂಲಕ ಸುಲಭವಾಗಿ ವಹಿವಾಟು ವಿಸ್ತರಿಸುತ್ತಿದೆ. ದೇಶದಾದ್ಯಂತ ಪಾಲುದಾರ ಬ್ಯಾಂಕ್‌ಗಳ 6 ಸಾವಿರಕ್ಕೂ ಶಾಖೆಗಳು ವಿಮೆ ಸೇವೆ ವಿಸ್ತರಣೆಗೆ ನೆರವಾಗುತ್ತಿವೆ. ಅಸ್ತಿತ್ವಕ್ಕೆ ಬಂದ ಐದು ವರ್ಷಗಳಲ್ಲಿ ₹ 9,000 ಕೋಟಿಗಳಷ್ಟು ಸಂಪತ್ತನ್ನು ನಿರ್ವಹಿಸುವ ಮಟ್ಟಕ್ಕೆ ಸಂಸ್ಥೆಯು ಬೆಳೆದಿದೆ. 2017ರ ಮಾರ್ಚ್ ಅಂತ್ಯದ ಹೊತ್ತಿಗೆ ಇದನ್ನು ₹ 10 ಸಾವಿರ ಕೋಟಿಗೆ ಹೆಚ್ಚಿಸಲು ಗುರಿ ಹಾಕಿಕೊಂಡಿದೆ.

ಸಂಸ್ಥೆಯು ಆರೋಗ್ಯ, ಭದ್ರತೆ, ಉಳಿತಾಯ ಮತ್ತು ಸಂಪತ್ತಿನ ವಿಮೆ ಸೌಲಭ್ಯಗಳ ಜತೆಗೆ, ಗುಂಪು ವಿಮೆ ಸೇವೆಯನ್ನೂ ಒದಗಿಸುತ್ತಿದೆ.ಗ್ರಾಮೀಣ ಪ್ರದೇಶಗಳಿಗೆ ವಹಿವಾಟು ವಿಸ್ತರಿಸಲು ಭವಿಷ್ಯದಲ್ಲಿ ಪೇಮೆಂಟ್ ಬ್ಯಾಂಕ್ ಮತ್ತು ಇತರ ಸಣ್ಣ ಬ್ಯಾಂಕ್‌ಗಳ ನೆರವು ಪಡೆಯುವ ಆಲೋಚನೆ ಇದೆ ಎಂದು ವಿಶಾಖಾ ಹೇಳುತ್ತಾರೆ.